ಓ.ಎಸ್. ನಂಃ **29/2024**

<u>ಪಿ.ಡಬ್ಲ್ಯೂಃ **1**</u>

ದಿನಾಂಕಃ 08-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎನ್.ಆರ್.ಕೆ ವಕೀಲರಿಂದಃ</u>

ದಾವಾ ಜಮೀನು ಗ್ರಾಮಕ್ಕೆ ಹೊಂದಿಕೊಂಡಿದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಸಾಕಷ್ಟು ಮನೆಗಳು ಇದ್ದಾವೆ ಎಂದರೆ ಸಾಕ್ಷಿಯು 6-7 ಮನೆಗಳು ಇದ್ದಾವೆ ಎಂದು ನುಡಿಯುತ್ತಾರೆ. ದಾವಾ ಜಮೀನಿನಲ್ಲಿ ಗ್ರಾಮ ಪಂಚಾಯಿತಿಯವರು ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ. ದಾವಾ ಜಮಿನಿನಲ್ಲಿ ವಿದ್ಯೂತ್ಕ ಕಂಬಗಳು ಸಹ ಇದ್ದಾವೆ ಎಂದರೆ ಸರಿ. ಸುಮಾರು 30-40 ವರ್ಷಗಳಿಂದ ಜನರು ದಾವಾ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ, 8-10 ವರ್ಷಗಳಿಂದ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ.

2. ದಾವಾ ಜಮೀನಿಗೆ ಹೊಂದಿಕೊಂಡು ಅನಂತಮ್ಮ ಮತ್ತು ವಿಜಯಕುಮಾರ ರವರ ಜಮೀನುಗಳು ಇದ್ದಾವೆ ಎಂದರೆ ಸರಿ. ಸದರಿಯವರ ಜಮೀನುಗಳು ಸಹ ಕೃಷಿ ಜಮೀನುಗಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಒಂದಿಷ್ಟು ಕೃಷಿ ಜಮೀನು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಒಂದು ಪೊಟೋವನ್ನು ತೋರಿಸಿ ಅದರಲ್ಲಿ ಕಾಣಿಸುತ್ತಿರುವ ಬಣಿವೆ ದಾವಾ ಜಮೀನಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಪೋಟೋದಲ್ಲಿ ನಿಂತಿರುವ ವ್ಯಕ್ತಿ ಪ್ರತಿವಾದಿಯ ಮಗ ಆಗಿರುತ್ತಾನೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಇರುವ ಮನೆಗಳಿಗೆ ಪಂಚಾಯಿತಿಯವರು ಆಸ್ತಿ ಸಂಖ್ಯೆಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಜಮೀನಿನಲ್ಲಿ ಬಣಿವೆ ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿ ಮೊದಲು ಇತ್ತು ಆ ನಂತರ ತೆಗೆದುಕೊಂಡಿದ್ದಾರೆ ಹಾಗೂ ಮತ್ತೆ ಬಣಿವೆ ಹಾಕುತ್ತೇವೆ ಎಂದು ಹೇಳಿದ್ದರಿಂದ ನಾನು ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವಾ ಜಮೀನಿನಲ್ಲಿ 30x20 ಅಡಿ ಜಾಗದಲ್ಲಿ ಬಣಿವೆ ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ, 10x10 ಅಡಿ ಜಾಗದಲ್ಲಿ ಬಣಿವೆ ಹಾಕಿಕೊಂಡಿದ್ದರು ಹಾಗೂ ಆ ನಂತರ ತೆಗೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ 30x20 ಅಡಿ ಜಾಗವನ್ನು ನನ್ನ ತಂದೆ ಪ್ರತಿವಾದಿಯ ಅಣ್ಣನ ಹೆಂಡತಿಯಾದ ಮಲ್ಲಮ್ಮ ರವರಿಗೆ ದಿನಾಂಕ 11.11.1996 ರಂದು ರೂ.3,600/- ಮೊತ್ತಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರೂ.10/- ಮೊತ್ತದ ಚಾಪಾ ಕಾಗದದ ಮೇಲೆ ನನ್ನ ತಂದೆ ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನನ್ನ ತಂದೆ ಸದರಿ ಜಾಗದ

ಸ್ವಾಧೀನ ವಹಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ಶರಣಪ್ಪ ಹಾಗೂ ತಿಮ್ಮಯ್ಯ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ದಿನದಿಂದ ಸದರಿ 30x20 ಅಡಿ ಜಾಗ ನಿಮ್ಮ ಅಥವಾ ನಿಮ್ಮ ತಂದೆಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿ ನಮ್ಮ ಸ್ವಾಧೀನದಲ್ಲಿಯೇ ಇದೆ ಆದರೆ ಪ್ರತಿವಾದಿ ಅಲ್ಲಿ ತಿಪ್ಪೆ ಮಾತ್ರ ಹಾಕಿಕೊಂಡಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿ ಹಾಗೂ ಅವರ ಅಣ್ಣನ ನಡುವಿನ ವಿಭಾಗದಲ್ಲಿ ಸದರಿ 30x20 ಅಡಿ ಜಾಗ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಆದಾಗಿನಿಂದ ಈವರೆಗೆ ಪ್ರತಿವಾದಿಯೇ ಸದರಿ ಜಾಗದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ಪಂಚಾಯಿತಿಯವರು ಆಸ್ತಿ ನಂಬರು ನೀಡಿದ್ದು ಪ್ರತಿವಾದಿ ತೆರಿಗೆ ಸಹ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ಆಸ್ತಿಯ ಬೆಲೆ ಹೆಚ್ಚಾಗಿರುವುದರಿಂದ ಪ್ರತಿವಾದಿಯಿಂದ ಹೆಚ್ಚಿನ ಹಣ ಪಡೆದುಕೊಳ್ಳಲು ಈ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯೇ ಸದರಿ 30x20 ಅಡಿ ಜಾಗದ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ